(ಶ್ರೀ ಕೆ. ಹೆಚ್. ಪಾಟೀಲ್)

(ಇ) (೧) ೧೯೭೬-೭೭ ರಲ್ಲಿ ಕಚ್ಚೆಹುಳು ನಿಯಂತ್ರಣಕ್ಕಾಗಿ ೫೦೦೦ ರೂಪಾಯಿ ವೆಚ್ಚ ತಗುಲಿದೆ.

(೨) ಸಸ್ಯ ಸಂರಕ್ಷಣೆಗೆ ೭೧-೭೨ ರಲ್ಲಿ ೫.೫೧ ಲಕ್ಷ ರೂಪಾಯಿ ಬ್ಲಾನ್ ರಾಟ್ ಬ್ಲೈಟ್ ರೋಗ ನಿಯಂತ್ರಿಸುವ ಕಾರ್ಯದಲ್ಲಿ ವೆಚ್ಚ ತಗಲಿರುತ್ತದೆ.

(೩) ೧೯೭೨-೭೩, ೧೯೭೩-೭೪ ಸಾಲುಗಳಲ್ಲಿ ಬ್ಲೈಟ್ ರೋಗ ನಿರೋಧಕ ಶಕ್ತಿಯುಳ್ಳ ಬಿತ್ತನೆ ಬೀಜಗಳನ್ನು ಬೆಳೆಸಿ ಒದಗಿಸುವ ಬಿತ್ತನೆ ಬೀಜಕ್ಕಾಗಿ, ೪೦,೦೦೦ ರೂಪಾಯಿ ವೆಚ್ಚ ತಗಲಿರುತ್ತದೆ.

ಹೇಮಾವತಿ ನದಿಯಿಂದ ಹಾಸನ ಟೌನಿಗೆ ನೀರು ಸರಬರಾಜು ಮಾಡುವ ಯೋಜನೆ

೮. ಶ್ರೀ ಕೆ. ಎಚ್. ಹನುಮೆಗೌಡ (ಹಾಸನ).—

ನಗರಾಡಳಿತ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಹಾಸನ ಟೌನಿನಲ್ಲಿ ಕುಡಿಯುವ ನೀರು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಆಗದೆ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹೇಮಾವತಿ ನದಿಯಿಂದ ಕುಡಿಯುವ ನೀರನ್ನು ಹಾಸನದ ಟೌನಿಗೆ ಸರಬರಾಜು ಮಾಡಲು ಪ್ಲಾನ್ ಮತ್ತು ಅಂದಾಜು ತಯಾರಾಗಿದೆಯೇ ; ಆಗಿದ್ದರೆ ಅಂದಾಜು ಮೊಬಲಗೆಷ್ಟು ;

(ಇ) ಈ ಕೆಲಸ ಯಾವಾಗ ಪ್ರಾರಂಭವಾಗಲಿದೆ ?

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಮಂತ್ರಿಗಳು).—

ಉತ್ತರ.—(ಅ) ಬಂದಿದೆ.

(ಆ) ತಯಾರಾಗಿದೆ. ಅಂದಾಜು ಮೊಬಲಗು 144 ಲಕ್ಷ.

(ಇ) ತಾರೀಖು 7.2-1973 ರಂದು ಪ್ರಾರಂಭವಾಗಿದೆ.

ಚಿಕ್ಕಮಗಳೂರು ಜಲ್ಲೆಯಲ್ಲಿ ಕನಬಾ ಹೋಬಳಿ ಹಲಸಬಾಳು ಗ್ರಾಮವಲ್ಲಿನ ಜಮೀನಿಗೆ ಕೋರಿ ಬಂದ ಅರ್ಜಿಗಳು

೧೧. ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಚಿಕ್ಕಮಗಳೂರು ತಹಸಿಲ್ದಾರರಿಗೆ ಕನಬಾ ಹೋಬಳಿ ಹಲಸಬಾಳು ಗ್ರಾಮದಲ್ಲಿನ ಸ. ನಂ. 35 ಹಾಗೂ 40ನೇ ಜಮೀನನ್ನು ಕೋರಿ ಅರ್ಜಿ ಹಾಕಿಕೊಂಡ ವ್ಯಕ್ತಿಗಳ ಸಂಖ್ಯೆ ಎಷ್ಟು ? ಮತ್ತು ಅರ್ಜಿ ಹಾಕಿಕೊಂಡ ದಿನಾಂಕಗಳಾವುವು ;

(ಆ) ಹಾಗಿದ್ದಲ್ಲಿ ಅವು ಅಂತಹ ರಿಕಾರ್ಡುಗಳು ಯಾವ ಹಂತದಲ್ಲಿವೆ ;

(ಇ) ಈ ಕಡತಗಳನ್ನು (ರಿಕಾರ್ಡುಗಳನ್ನು) ಸ್ಪೆಷಲ್ ದರಖಾಸ್ತು ಅಸಿಸ್ಟೆಂಟರವರ ಗಮನಕ್ಕೆ ಕಳುಹಿಸಲಾದ ದಿನಾಂಕ ಯಾವುದು ಇವುಗಳನ್ನು ಅಂತಿಮಗೊಳಿಸುವುದಕ್ಕೆ ಗರಿಷ್ಟ ಕಾಲಮಿತಿಯನ್ನೇನಾದರೂ ಸರ್ಕಾರದವರು ನಿಗದಿ ಮಾಡಿದ್ದಾರೆಯೆ ;

(ಈ) ಸದ್ರಿ ಕಾಗದ ಪತ್ರಗಳು ಎಷ್ಟು ಕಾಲದಿಂದ ಸ್ಪೆಷಲ್ ಆಗಿ ಅಸಿಸ್ಟೆಂಟ್ ಕಮೀಷನರ್ ರವರ ಆಫೀಸಿನಲ್ಲಿ ಇತ್ಯರ್ಥವಾಗದೆ ಹಾಗೆ ಉಳಿದಿವೆ ;

(ಊ) ಸದ್ರಿ ರಿಕಾರ್ಡುಗಳು ಹರಿಜನರಿಗೆ ವಹಿಸಿಕೊಡುವ ಬಗ್ಗೆ ಕಾರ್ಯವಾಹಿಗಳು ನಡೆದಿದ್ದರೂ ಹರಿಜನರಲ್ಲದವರಿಗೆ ಸದ್ರಿ ಜಮೀನು ಮೀಸಲಾಗಿಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಋ) ಹಾಗಿದ್ದಲ್ಲಿ ಹರಿಜನರಿಗೆ ಸದರಿ ಜಮೀನು ಮಂಜೂರು ಮಾಡಲು ಕನಿಷ್ಠ ಸಮಯಾವಕಾಶ ;

(ಱ) ಸದ್ರಿ ಜಮೀನು ಹರಿಜನರಲ್ಲದವರಿಗೆ ಮೀಸಲಾಗಿರುವುದರಿಂದ ಹರಿಜನರಿಗೆ ರಿಕಾರ್ಡು ಆಗಿರುವುದರಿಂದ ಹರಿಜನರಿಗೆ ಮಂಜೂರು ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ ಮತ್ತು ಜಾಗ್ರತೆ ಹರಿಜನರಿಗೆ ಸಾಗುವಳಿ ಚೀಟಿ ಕೊಡಲು ಏರ್ಪಾಡು ಮಾಡುವರೆ, ಕಾರ್ಯವಾಹಿಗಳು ನಡೆದಿರುವವರ ಪರವಾಗಿಯೇ ಎಂದರೆ ಹರಿಜನರಿಗೇ ಜಮೀನು ದೊರಕುವಂತಾಗಲು ಸರ್ಕಾರದವರು ಕೈಗೊಳ್ಳಲುದ್ದೇಶಿಸಿರುವ ಕ್ರಮಗಳೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಮಂತ್ರಿಗಳು).—

(ಅ) ಸ. ನಂ. 35ಕ್ಕೆ ಮಾತ್ರ ಅರ್ಜಿಗಳು ದಿನಾಂಕ 27-8-1970 ರಂದು ಬಂದಿರುತ್ತೆ. ಸ. ನಂ. 40 ಕ್ಕೆ ಯಾವ ಅರ್ಜಿಗಳು ಬಂದಿರುವುದಿಲ್ಲ.

(ಆ) ಸ. ನಂ. 35 ರಲ್ಲಿ ಪೂರ್ಣವಾಗಿ ರಿಕಾರ್ಡ್ ನಡವಳಿಕೆ ನಡೆದು ಈಗಿನ ದರಖಾಸ್ತು ವಿಲೇವಾರಿ ಸಮಿತಿಯ ಗಮನಕ್ಕೆ ತರುವ ಹಂತದಲ್ಲಿರುತ್ತೆ.

(ಇ) ದರಖಾಸ್ತು ಜಮೀನು ವಿಲೇವಾರಿಯ ಎಲ್ಲ ನಿಯಮಗಳನ್ನು ಅನುಸರಿಸಿ ಸಮಿತಿಯ ಅಭಿಪ್ರಾಯ ಪಡೆದು ಶಿಫಾರಸ್ಸು ಮಾಡಿದನಂತರ ಸ್ಪೆಷರ್ ದರಖಾಸ್ತು ಅಸಿಸ್ಟೆಂಟರು ಅಂತಿಮ ಗೊಳಿಸುತ್ತಾರೆ.

(ಈ) ಸದರಿ ರಿಕಾರ್ಡುಗಳು ಸ್ಪೆಷಲ್ ಅಸಿಸ್ಟೆಂಟ್ ಕಮೀಷನರ್‌ರವರ ಆಫೀಸಿಗೆ ಬಂದಿರುವುದಿಲ್ಲ.

(ಉ) ಈ ಜಮೀನು ಬೇರೆ ಜನರಿಗೆ ಮಾಸರವಾಗಿಲ್ಲ.

(ಊ) ಎಲ್ಲಾ ದರಖಾಸ್ತು ನಿಯಮಗಳನ್ನು ಅನುಸರಿಸಿ ದರಖಾಸ್ತು ಕಮಿಟಿಯು ಸಲಹೆ ಪಡೆದು ದರಖಾಸ್ತು ನಿಯಮಾವಳಿ ಪ್ರಕಾರ ಅರ್ಹತೆಯುಳ್ಳಲ್ಲಿ ಮಂಜೂರುಮಾಡಲಾಗುತ್ತೆ.

(ಋ) ಈ ಜಮೀನು ಬೇರೆ ಜನರಿಗೆ ಮೀಸಲಾಗಿರುವುದಿಲ್ಲ. ದರಖಾಸ್ತುದಾರರಿಗೆ ಅತಿ ಜಾಗ್ರತೆ ಪರಿಶೀಲಿಸಿ ಮಂಜೂರುಮಾಡಿ ಸಾಗುವಳಿ ಚೀಟಿ ಕೊಡಲಾಗುತ್ತೆ.

## Construction of District Health and F. P. at Chickmagalur

20. Sri G. PUTTASWAMY (Mudigere).—

Will the Minister for Health be pleased to state :—

(*a*) whether it is a fact that a building for housing the District Health Office of Chickmagalur is proposed to be constructed in the premises of the children ward attached to General Hospital, Chickmagalur ;

(*b*) whether it has come to the notice of the Government that there will be no scope to extend the children ward, if the Health Office building were constructed in the same premises ; if so, the steps taken to construct the Health Office Building elsewhere ;

(*c*) whether it is a fact that the present children ward building called as Kalmane Centre was donated by European planter for the purpose of Children Welfare Centre ?